ಗುಡಿಸಲುಗಳಲ್ಲಿ ವಾಸಿಸುವವರನ್ನು ಒಳಗೊಂಡಂತೆ ರಾಜ್ಯದಲ್ಲಿ ಈ ಕೆಳಗಿನಂತೆ ವಸತಿರಹಿತ ಮತ್ತು ನಿವೇಶನರಹಿತರ ಸಂಖ್ಯೆ ಇರುತ್ತದೆ

ಪ್ರದೇಶ	ವಸತಿ ರಹಿತರು	ನಿವೇಶನ ರಹಿತರು	ಒಟ್ಟು
ಗ್ರಾಮೀಣ	1226345	1042986	2269331
ನಗರ	73444	255827	329271
ಒಟ್ಟು	**12997789**	**1298813**	**2598602**

ಈ ಸಮೀಕ್ಷೆಯ ನಂತರ 2003–04 ರಿಂದ 2006–07ನೇ ಸಾಲಿನ ವರೆಗೆ ಒಟ್ಟು 28417 ನಿವೇಶನಗಳನ್ನು ಹಂಚಲಾಗಿರುತ್ತದೆ

523(940) ಶ್ರೀ ಪಾಟೀಲ್ ಡಿ ಆರ್ (ಗದಗ್) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಗ್ರಾಮ ಸಭೆಗಳನ್ನು ಇನ್ನಷ್ಟು ಪರಿಣಾಮಕಾರಿ ಮಾಡಲು ಹಾಗೂ ಅದರ ಮೂಲಕ ಗ್ರಾಮ ಪಂಚಾಯತ್ ವ್ಯವಸ್ಥೆಯಲ್ಲಿ ಪಾರದರ್ಶಕ ಆಡಳಿತ ನಡೆಸಲು ಸರಕಾರ ಯೋಚಿಸಿರುವ ಕಾರ್ಯಕ್ರಮಗಳೇನು,

ಆ) ಅವುಗಳನ್ನು ಹೇಗೆ ಅನುಷ್ಠಾನಗೊಳಿಸಲಾಗುವುದು,

ಇ) ಪಂಚಾಯತ್ ವ್ಯಾಪ್ತಿಯಲ್ಲಿ ನಡೆಯುವ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸುವ ಹಣದ ಲೆಕ್ಕಾಚಾರವೆಲ್ಲ ಗ್ರಾಮ ಸಭೆಯ ಮುಂದೆ ಪರಾಮರ್ಶೆಗೆ ಬರುವ ಹಾಗೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಈಗಾಗಲೇ ಗ್ರಾಮ ಸಭೆ ನಡೆಸುವುದನ್ನು ಶಾಸನಬದ್ಧ ಜವಾಬ್ದಾರಿಯೆಂದು ಕಡ್ಡಾಯಗೊಳಿಸಲಾಗಿದೆ ಈ ಬಗ್ಗೆ ಗ್ರಾಮ ಪಂಚಾಯತಿಗಳಿಗೆ ಸೂಚನೆ ನೀಡಲಾಗಿದೆ ಗ್ರಾಮ ಸಭೆಗಳನ್ನು ನಡೆಸುವ ಬಗ್ಗೆ ಮಾರ್ಗಸೂಚಿಗಳನ್ನು ಸಹ ನೀಡಲಾಗಿದೆ

ಆ) ವಾರ್ಷಿಕವಾಗಿ ಕನಿಷ್ಟ 2 ಸಾರಿ ಗ್ರಾಮ ಸಭೆ ನಡೆಸಲಾಗುವುದು

ಗ್ರಾಮ ಸಭೆಗೆ ಕ್ಷೇತ್ರ ಇಲಾಖೆಗಳ ಸ್ಥಳೀಯ ಅಧಿಕಾರಿಗಳನ್ನು ಸಭೆಯಲ್ಲಿ ಭಾಗವಹಿಸುವುದನ್ನು ಕಡ್ಡಾಯಗೊಳಿಸಲಾಗಿದೆ

ಸ್ಥಳೀಯ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಗ್ರಾಮಸ್ಥರು ಅಧಿಕಾರಿಗಳೊಡನೆ ಚರ್ಚಿಸುವ ಅವಕಾಶ ಕಲ್ಪಿಸಲಾಗಿದೆ

ಇ) ಸ್ಥಳೀಯ ಕಾಮಗಾರಿಗಳ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವೆಚ್ಚ ಮಾಡುವ ಅನುದಾನದ ವಿವರಗಳ ಬಗ್ಗೆ ಚರ್ಚಿಸಲು ಅವಕಾಶ ಕಲ್ಪಿಸಲಾಗಿದೆ

ಸ್ಥಳೀಯ ಚುನಾಯಿತ ಪಂಚಾಯತ್ ಸಂಸ್ಥೆಗಳ ಆರ್ಥಿಕ ವ್ಯವಹಾರಗಳ ಪರಿಶೀಲನೆಗಾಗಿ ಜಮಾಬಂಧಿ ಕಾರ್ಯಕ್ರಮವನ್ನು ಸಹ ಹಮ್ಮಿಕೊಳ್ಳಲು ಪಂಚಾಯತ್ ರಾಜ್ ಅಧಿನಿಯಮದಲ್ಲಿ ಅವಕಾಶ ಕಲ್ಪಿಸಲಾಗಿದೆ ಜಮಾ ಬಂದಿ ಕಾರ್ಯಕ್ರಮವನ್ನು ಸಹ ಕಡ್ಡಾಯಗೊಳಿಸಲಾಗಿದೆ

524(941) ಶ್ರೀ ಡಿ ಆರ್ ಪಾಟೀಲ (ಗದಗ್) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಗ್ರಾಮೀಣ ಪ್ರದೇಶದಲ್ಲಿ ಮತ್ತು ನಗರ ಪ್ರದೇಶದಲ್ಲಿರುವ ವಸತಿಹೀನರ ಸಂಖ್ಯೆ ಎಷ್ಟು, (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಈ ವಸತಿಹೀನರಿಗೆಲ್ಲ ವಸತಿ ಕಲ್ಪಿಸಲು ಸರಕಾರ ಬದ್ದವಾಗಿದೆಯೇ, ಹಾಗಿದ್ದಲ್ಲಿ, ಈ ಗುರಿ ಮುಟ್ಟಲು ಸರಕಾರದ ಕ್ರಮಗಳೇನು,

ಇ) ಈ ಕಾರ್ಯಕ್ರಮ ಅನುಷ್ಠಾನಗೊಳಿಸಲು ಬೇಕಾಗುವ ಹಣಕಾಸು ಎಷ್ಟು, ಮುಂದಿನ ಆಯವ್ಯಯದಲ್ಲಿ ಒದಗಿಸಲಿರುವ ಹಣ ಎಷ್ಟು,

ಈ) ಎಲ್ಲಾ ವಸತಿ ಬಡ ಕುಟುಂಬಗಳು ಸಾಲ ಮರುಪಾವತಿ ವ್ಯವಸ್ಥೆಗೆ ಒಪ್ಪದಿದ್ದಲ್ಲಿ ಮೊದಲು ಬಂದವರಿಗೆ ಪ್ರಾಶಸ್ತ್ಯ ನೀಡಿ ಫಲಾನುಭವಿಗಳ ಆಯ್ಕೆ ಮಾಡಲಾಗುವುದೆ,

ಉ) ಈ ರೀತಿಯ ಆಯ್ಕೆಯ ಬಗ್ಗೆ ಪಾರದರ್ಶಕತೆಯನ್ನು ಜಾರಿಗೊಳಿಸಲಾಗುವುದೇ?